2017 ಕ.ತೀ.ವ 644

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹಾಣ್

ಶ್ರೀ ಭಾರ್ಗವ್ ಬಿ.ಎಲ್. –ವಿರುದ್ಧ– ಡಾ॥ ರಾಮ್ ಮನೋಹರ್ ಲೋಹಿಯಾ ಕಾನೂನು ಕಾಲೇಜ್ ಮತ್ತು ಇತರರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಗಳ ವಿನಿಯಮಗಳು.

ಕರ್ನಾಟಕ ಪದವಿ ಪೂರ್ವ ಶಿಕ್ಷಣ(ಶೈಕ್ಷಣಿಕ, ನೋಂದಣಿ, ಆಡಳಿತ ಹಾಗೂ ಅನುದಾನ) ನಿಯಮಗಳು, 2006.

ಅರ್ಜಿದಾರನು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಯಾವುದೇ ಸಂಯೋಜಿತ ಕಾಲೇಜಿನಲ್ಲಿ 5 ವರ್ಷಗಳ ಬಿ.ಎ., ಎಲ್.ಎಲ್.ಬಿ., ಪ್ರವೇಶಕ್ಕೆ ಕೋರಿ ಅರ್ಜಿ ಸಲ್ಲಿಸಿದ್ದಾನೆ. ದಿನಾಂಕ 31.08.2016ರಂದು ಪ್ರವೇಶ ಶುಲ್ಕವನ್ನು ಸಲ್ಲಿಸುವುದಕ್ಕಾಗಿ ಕೊನೆಯ ದಿನಾಂಕವಾಗಿರುವುದರಿಂದ, ಈ ಪ್ರಕರಣವನ್ನು ತಾನಾಗಿ ಈ ಹಂತದಲ್ಲಿ ತೀರ್ಮಾನಿಸಬೇಕಾಗಿದೆ.

ಅರ್ಜಿದಾರನು, ರಿಟ್ ಅರ್ಜಿಯ ತಿದ್ದುಪಡಿಗಾಗಿ ಅರ್ಜಿಯನ್ನು ಸಲ್ಲಿಸಿದ್ದಾನೆ. ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ಪ್ರಕಾರ, ಅರ್ಜಿದಾರನು, ತನ್ನ ಅರ್ಜಿಯನ್ನು ಪ್ರತ್ಯರ್ಜಿದಾರರಿಂದ ಪರಿಗಣಿಸತಕ್ಕದ್ದು ಎಂದು ಕೋರಿದ್ದಾನೆ. ಹೀಗೆ ಆದಾಗ್ಯೂ, ಪ್ರಸ್ತುತ ಅರ್ಜಿಯ ಇತ್ಯರ್ಥದ ಅವಧಿಯಲ್ಲಿ, 2ನೇ ಪ್ರತ್ಯರ್ಜಿದಾರನು, ಪತ್ರ ವ್ಯವಹಾರ ದಿನಾಂಕ 13.8.2015ನ್ನು ನೀಡಿದ್ದು, ಈ ಮೂಲಕ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿದ್ದಾನೆ. ಆದ್ದರಿಂದ, ಪತ್ರ ವ್ಯವಹಾರ ದಿನಾಂಕ 13.8.2015ನ್ನು

*ರಿಟ್ ಅರ್ಜಿ ಸಂಖ್ಯೆ: 10458/2016 (ಇಡಿಎನ್–ಎಡಿ), ದಿನಾಂಕ: 29ನೇ ಆಗಸ್ಟ್, 2016.

ಪ್ರಶ್ನಿಸಿ ಆದೇಶಿಸುವಂತೆ ಅರ್ಜಿದಾರನ ಪ್ರಸ್ತುತ ರಿಟ್ ಅರ್ಜಿಯನ್ನು ತಿದ್ದುಪಡಿ ಮಾಡುವುದು ಅಗತ್ಯವಾಗಿದೆ.

ಪತ್ರ ವ್ಯವಹಾರ ದಿನಾಂಕ 13.08.2015 ಈ ಪ್ರಕರಣದ ತರುವಾಯದ ಬೆಳವಣಿಗೆಯಾಗಿದ್ದು, ಸದರಿ ಪತ್ರ ವ್ಯವಹಾರ, ಅರ್ಜಿದಾರರ ಹಕ್ಕಿಗೆ ಪ್ರತಿಕೂಲ ಪರಿಣಾಮ ಉಂಟು ಮಾಡಿರುವುದರಿಂದ ಮತ್ತು ಆಕ್ಷೇಪಣೆ ಇಲ್ಲದೇ ಇರುವುದರಿಂದ, ಪ್ರಸ್ತಾವಿತ ತಿದ್ದುಪಡಿಗಾಗಿ ಎತ್ತಲಾಗಿದ್ದು, ರಿಟ್ ಅರ್ಜಿಯ ತಿದ್ದುಪಡಿಗಾಗಿನ ಅರ್ಜಿಯನ್ನು ಪುರಸ್ಕರಿಸಲಾಗಿದೆ ಎಂದು ಹೇಳಲಾಗಿದೆ.

ಅರ್ಜಿದಾರನು, ಪತ್ರ ವ್ಯವಹಾರ ದಿನಾಂಕ 13.08.2015ರ ಮೂಲ ಪ್ರತಿಯನ್ನು ಸಲ್ಲಿಸುವುದರೊಂದಿಗೆ ವಿನಾಯಿತಿ ನೀಡುವುದಕ್ಕಾಗಿ ಸಹ ಅರ್ಜಿಯನ್ನು ದಾಖಲು ಮಾಡಿದ್ದಾನೆ. ಅರ್ಜಿದಾರನ ಪ್ರಕಾರ, ಇದುವರೆಗೂ ಅವನು, ಸದರಿ ಪತ್ರ ವ್ಯವಹಾರದ ಪ್ರತಿಯನ್ನು ಸ್ವೀಕರಿಸಿರುವುದಿಲ್ಲ. ಆದಾಗ್ಯೂ, ಕೊನೆಯ ದಿನಾಂಕದಂದು, ಅಂದರೆ, ದಿನಾಂಕ 26.08.2016ರಂದು, ಸದರಿ ಪತ್ರ ವ್ಯವಹಾರ ಪತ್ರವನ್ನು 2ನೇ ಪ್ರತ್ಯರ್ಜಿದಾರನ ಪರವಾಗಿ ಮಾನ್ಯ ನ್ಯಾಯವಾದಿಯು ಹಾಜರುಪಡಿಸಿದ್ದಾನೆ. ಸದರಿ ಪತ್ರ ವ್ಯವಹಾರದ ಪತ್ರವನ್ನು, ನ್ಯಾಯಿಕ ದಾಖಲೆ ಮೇಲೆ ಈ ನ್ಯಾಯಾಲಯ ಈಗಾಗಲೇ ತೆಗೆದುಕೊಂಡಿರುವುದರಿಂದ, ಮೂಲ ಪತ್ರವನ್ನು ಸಲ್ಲಿಸುವುದಕ್ಕೆ ಈ ನ್ಯಾಯಾಲಯ ವಿನಾಯಿತಿ ನೀಡಬೇಕೆಂದು ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಕೋರಿದ್ದಾರೆ.

ಪತ್ರ ವ್ಯವಹಾರ ದಿನಾಂಕ 13.08.2015 ಈಗಾಗಲೇ ನ್ಯಾಯಿಕ ದಾಖಲೆಯ ಭಾಗವಾಗಿರುವುದರಿಂದ, ಈ ನ್ಯಾಯಾಲಯದ ಮುಂದೆ ಸದರಿ ಪತ್ರ ವ್ಯವಹಾರದ ಮೂಲ ಪ್ರತಿಯನ್ನು ಅರ್ಜಿದಾರನು ಸಲ್ಲಿಸುವ ಅಗತ್ಯವಿರುವುದಿಲ್ಲ ಎಂದು ಅಭಿಪ್ರಾಯಪಟ್ಟು ಸದರಿ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅರ್ಜಿದಾರರ ಪರವಾಗಿ: ಶ್ರೀ ರಾಜಾಧಿತ್ಯ ಸದಾಶಿವನ್, ವಕೀಲರು.

1ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಸಿ.ಎನ್. ಮಹದೇಶ್ವರನ್, ವಕೀಲರು.

2ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಗಣಪತಿ ಭಟ್, ವಕೀಲರು.

3ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀಮತಿ ಗೀತಾದೇವಿ ಎಂ.ಪಿ. ವಕೀಲರು.

4ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ನಟರಾಜ್ ಜಿ., ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹಾಣ್:**

ಅರ್ಜಿದಾರನು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಯಾವುದೇ ಸಂಯೋಜಿತ ಕಾಲೇಜಿನಲ್ಲಿ 5 ವರ್ಷಗಳ ಬಿ.ಎ., ಎಲ್.ಎಲ್.ಬಿ., ಪ್ರವೇಶಕ್ಕೆ ಕೋರಿ ಅರ್ಜಿ ಸಲ್ಲಿಸಿದ್ದಾನೆ. ದಿನಾಂಕ 31.08.2016ರಂದು ಪ್ರವೇಶ ಶುಲ್ಕವನ್ನು ಸಲ್ಲಿಸುವುದಕ್ಕಾಗಿ ಕೊನೆಯ ದಿನಾಂಕವಾಗಿರುವುದರಿಂದ, ಈ ಪ್ರಕರಣವನ್ನು ತಾನಾಗಿ ಈ ಹಂತದಲ್ಲಿ ತೀರ್ಮಾನಿಸಬೇಕಾಗಿದೆ.

2. ಅರ್ಜಿದಾರನು, ರಿಟ್ ಅರ್ಜಿಯ ತಿದ್ದುಪಡಿಗಾಗಿ ಅರ್ಜಿಯನ್ನು ಸಲ್ಲಿಸಿದ್ದಾನೆ. ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ಪ್ರಕಾರ, ಅರ್ಜಿದಾರನು, ತನ್ನ ಅರ್ಜಿಯನ್ನು ಪ್ರತ್ಯರ್ಜಿದಾರರಿಂದ ಪರಿಗಣಿಸತಕ್ಕದ್ದು ಎಂದು ಕೋರಿದ್ದಾನೆ. ಹೀಗೆ ಆದಾಗ್ಯೂ, ಪ್ರಸ್ತುತ ಅರ್ಜಿಯ ಇತ್ಯರ್ಥದ ಅವಧಿಯಲ್ಲಿ, 2ನೇ ಪ್ರತ್ಯರ್ಜಿದಾರನು, ಪತ್ರ ವ್ಯವಹಾರ ದಿನಾಂಕ 13.8.2015ನ್ನು ನೀಡಿದ್ದು, ಈ ಮೂಲಕ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿದ್ದಾನೆ. ಆದ್ದರಿಂದ, ಪತ್ರ ವ್ಯವಹಾರ ದಿನಾಂಕ 13.8.2015ನ್ನು ಪ್ರಶ್ನಿಸಿ ಆದೇಶಿಸುವಂತೆ ಅರ್ಜಿದಾರನ ಪ್ರಸ್ತುತ ರಿಟ್ ಅರ್ಜಿಯನ್ನು ತಿದ್ದುಪಡಿ ಮಾಡುವುದು ಅಗತ್ಯವಾಗಿದೆ.

3. ಪತ್ರ ವ್ಯವಹಾರ ದಿನಾಂಕ 13.08.2015 ಈ ಪ್ರಕರಣದ ತರುವಾಯದ ಬೆಳವಣಿಗೆಯಾಗಿದ್ದು, ಸದರಿ ಪತ್ರ ವ್ಯವಹಾರ, ಅರ್ಜಿದಾರರ ಹಕ್ಕಿಗೆ ಪ್ರತಿಕೂಲ

ಪರಿಣಾಮ ಉಂಟು ಮಾಡಿರುವುದರಿಂದ ಮತ್ತು ಆಕ್ಷೇಪಣೆ ಇಲ್ಲದೇ ಇರುವುದರಿಂದ, ಪ್ರಸ್ತಾವಿತ ತಿದ್ದುಪಡಿಗಾಗಿ ಎತ್ತಲಾಗಿದ್ದು, ರಿಟ್ ಅರ್ಜಿಯ ತಿದ್ದುಪಡಿಗಾಗಿನ ಅರ್ಜಿಯನ್ನು ಪುರಸ್ಕರಿಸಲಾಗಿದೆ.

4. ಅರ್ಜಿದಾರನು, ಪತ್ರ ವ್ಯವಹಾರ ದಿನಾಂಕ 13.08.2015ರ ಮೂಲ ಪ್ರತಿಯನ್ನು ಸಲ್ಲಿಸುವುದರೊಂದಿಗೆ ವಿನಾಯಿತಿ ನೀಡುವುದಕ್ಕಾಗಿ ಸಹ ಅರ್ಜಿಯನ್ನು ದಾಖಲು ಮಾಡಿದ್ದಾನೆ. ಅರ್ಜಿದಾರನ ಪ್ರಕಾರ, ಇದುವರೆಗೂ ಅವನು, ಸದರಿ ಪತ್ರ ವ್ಯವಹಾರದ ಪ್ರತಿಯನ್ನು ಸ್ವೀಕರಿಸಿರುವುದಿಲ್ಲ. ಆದಾಗ್ಯೂ, ಕೊನೆಯ ದಿನಾಂಕದಂದು, ಅಂದರೆ, ದಿನಾಂಕ 26.08.2016ರಂದು, ಸದರಿ ಪತ್ರ ವ್ಯವಹಾರ ಪತ್ರವನ್ನು 2ನೇ ಪ್ರತ್ಯರ್ಜಿದಾರನ ಪರವಾಗಿ ಮಾನ್ಯ ನ್ಯಾಯವಾದಿಯು ಹಾಜರುಪಡಿಸಿದ್ದಾನೆ. ಸದರಿ ಪತ್ರ ವ್ಯವಹಾರದ ಪತ್ರವನ್ನು, ನ್ಯಾಯಿಕ ದಾಖಲೆ ಮೇಲೆ ಈ ನ್ಯಾಯಾಲಯ ಈಗಾಗಲೇ ತೆಗೆದುಕೊಂಡಿರುವುದರಿಂದ, ಮೂಲ ಪತ್ರವನ್ನು ಸಲ್ಲಿಸುವುದಕ್ಕೆ ಈ ನ್ಯಾಯಾಲಯ ವಿನಾಯಿತಿ ನೀಡಬೇಕೆಂದು ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ಕೋರಿದ್ದಾನೆ.

5. ಪತ್ರ ವ್ಯವಹಾರ ದಿನಾಂಕ 13.08.2015 ಈಗಾಗಲೇ ನ್ಯಾಯಿಕ ದಾಖಲೆಯ ಭಾಗವಾಗಿರುವುದರಿಂದ, ಈ ನ್ಯಾಯಾಲಯದ ಮುಂದೆ ಸದರಿ ಪತ್ರ ವ್ಯವಹಾರದ ಮೂಲ ಪ್ರತಿಯನ್ನು ಅರ್ಜಿದಾರನು ಸಲ್ಲಿಸುವ ಅಗತ್ಯವಿರುವುದಿಲ್ಲ.

6. 2ನೇ ಪ್ರತ್ಯರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ಲಿಖಿತ ಆಕ್ಷೇಪಣೆಗಳನ್ನು ದಾಖಲು ಮಾಡಿದ್ದಾನೆ ಮತ್ತು ಅದನ್ನು ದಾಖಲೆ ಮೇಲೆ ತೆಗೆದುಕೊಳ್ಳತಕ್ಕದ್ದು.

7. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ಉಭಯ ನ್ಯಾಯವಾದಿಗಳ ಸಮ್ಮತಿಯೊಂದಿಗೆ, ಈ ಪ್ರಕರಣವನ್ನು, ಈ ಸಂದರ್ಭದಲ್ಲಿ ತೀರ್ಮಾನಿಸಬೇಕಾಗಿದೆ. ಈ ಮೊಕದ್ದಮೆಯ ಸಂಕ್ಷಿಪ್ತಗಳ ಸಂಗತಿಗಳೆಂದರೆ,

8. ಅರ್ಜಿದಾರನು 2005ರಲ್ಲಿ ರೆಗ್ಯುಲರ್ ಸ್ಕೂಲಿಂಗ್ ಮೂಲಕ ಅವನು ಎಸ್‌ಎಸ್‌ಎಲ್‌ಸಿ ಯನ್ನು ಪೂರ್ಣಗೊಳಿಸಿದ್ದಾನೆಂಬುದು ತರುವಾಯ, ಬಿಎನ್‌ಇಎಸ್ ಪದವಿ ಪೂರ್ವ ಕಾಲೇಜಿನಲ್ಲಿ ತನ್ನ ಮೊದಲನೇ ವರ್ಷದ ಪದವಿ ಪೂರ್ವ ಕೋರ್ಸನ್ನು ಅವನು 2006ರಲ್ಲಿ ಪೂರ್ಣಗೊಳಿಸಿದ್ದಾನೆ. ಹಾಗಾಗಿ, ಎರಡನೇ ವರ್ಷದ ಪಿಯುಸಿ ಕೋರ್ಸನ್ನು ಅವನು ಖಾಸಗಿ ವಿದ್ಯಾರ್ಥಿಯಾಗಿ ಹಾಜರಾಗಿದ್ದಾನೆ ಮತ್ತು ತನ್ನ ಎರಡನೇ ವರ್ಷದ ಪಿಯುಸಿಯನ್ನು ಅವನು 2011ರಲ್ಲಿ ಪಾಸು ಮಾಡಿದ್ದಾನೆ. ಡಾ॥ ರಾಮ್ ಮನೋಹರ್ ಲೋಹಿಯಾ ಕಾನೂನು ಕಾಲೇಜಿನಲ್ಲಿ 5 ವರ್ಷ ಬಿ.ಎ.ಎಲ್.ಎಲ್.ಬಿ.,ಗೆ ಪ್ರವೇಶ ಕೋರಿ ಇಚ್ಛಿಸಿದ್ದು, ಅರ್ಜಿದಾರನು ಸದರಿ ಕಾಲೇಜಿನಲ್ಲಿ ಪ್ರವೇಶಕ್ಕಾಗಿ ತನ್ನ ಅರ್ಜಿಯನ್ನು ಸಲ್ಲಿಸಿದ್ದಾನೆ. ಹಾಗಾಗಿ, ಎರಡನೇ ವರ್ಷದ ಪದವಿ ಪೂರ್ವ ಪರೀಕ್ಷೆಯನ್ನು ತಾನು ಖಾಸಗಿಯಾಗಿ ಪೂರ್ಣಗೊಳಿಸಿದ್ದು, ಪ್ರವೇಶ ಕೋರಿದ ಅವನ ಅರ್ಹತೆಯು ಸಂದೇಹಾಸ್ಪದವಾಗಿದೆಯೆಂದು ಕಾಲೇಜಿನಿಂದ ತಿಳಿಸಲಾಗಿದೆ. ಆದ್ದರಿಂದ, ಅರ್ಜಿದಾರರ ಅರ್ಜಿಯನ್ನು ಇತ್ಯರ್ಥಕ್ಕಾಗಿ ಇಟ್ಟುಕೊಂಡಿದೆ. ತರುವಾಯ ಪತ್ರ ವ್ಯವಹಾರ ದಿನಾಂಕ 13.8.2015ರ ಮೂಲಕ, ಅರ್ಜಿದಾರನು ತನ್ನ ಎರಡನೇ ವರ್ಷದ ಪಿಯುಸಿಯನ್ನು, ಖಾಸಗಿಯಾಗಿ ಪೂರ್ಣಗೊಳಿಸಿದ್ದಾನೆಂಬ ಸಂಗತಿಯನ್ನು ಪರಿಗಣಿಸಿದ್ದು, ಅವನ ಅರ್ಜಿಯನ್ನು ಅಂಗೀಕರಿಸಲಾಗದೆಂದು ತಿಳಿಸಲಾಗಿದೆ. ಹಾಗಾಗಿ, ಈ ಅರ್ಜಿಯು ಈ ನ್ಯಾಯಾಲಯದ ಮುಂದೆ ಬಂದಿದೆ.

9. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯಗಳ ವಿನಿಯಮನ (ಸಂಕ್ಷಿಪ್ತವಾಗಿ ವಿನಿಯಮಗಳ) 7ನೇ ವಿನಿಯಮನ, ಪ್ರವೇಶಕ್ಕಾಗಿ ಅರ್ಹತಾ ಪ್ರಮಾಣಗಳೊಂದಿಗೆ 5 ವರ್ಷದ ಬಿ.ಎ.ಎಲ್.ಎಲ್.ಬಿ., ಪದವಿ ಕೋರ್ಸ್‌ನ ಪ್ರವೇಶದ ಬಗ್ಗೆ ವ್ಯವಹರಿಸುವುದನ್ನು ನಿಯಂತ್ರಿಸಲ್ಪಟ್ಟಿದೆಯೆಂದು ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ರಾಜಾಧಿತ್ಯ ಸದಾಶಿವನ್‌ರವರು ವಾದಿಸಿದ್ದಾರೆ. ವಿನಿಯಮಗಳ 7ನೇ ವಿನಿಯಮದ ಪ್ರಕಾರ, ಅಪೀಲುದಾರನು, ಪಿಯುಸಿ ಅಥವಾ ಭಾರತದಲ್ಲಿ ಮನ್ನಣೆ ಪಡೆದ ವಿಶ್ವವಿದ್ಯಾಲಯದಿಂದ ಸೀನಿಯರ್ ಸೆಕೆಂಡರಿ ಸ್ಕೂಲ್ ಕೋರ್ಸ್ ಅಥವಾ ಹೊರಗೆ ಅಥವಾ ಸೀನಿಯರ್ ಸೆಕೆಂಡರಿ ಬೋರ್ಡ್ ಅಥವಾ ಅದಕ್ಕೆ ಸಮನಾದ ಮಂಡಲಿಯಿಂದ ಯಶಸ್ವಿಯಾಗಿ

ಪೂರ್ಣಗೊಳಿಸಿರಬೇಕು. ವಿನಿಯಮಗಳ ಸದರಿ 7ನೇ ವಿನಿಯಮವು ಮನ್ನಣೆ ಪಡೆದ ಕಾಲೇಜಿನಿಂದ ಅಥವಾ ಖಾಸಗಿಯಾಗಿ ಪಿಯುಸಿ ಪೂರ್ಣಗೊಳಿಸಿರುವುದರ ನಡುವೆ ವ್ಯತ್ಯಾಸ ಮಾಡಿರುವುದಿಲ್ಲ. ಅರ್ಜಿದಾರನು ತನ್ನ ಎರಡನೇ ವರ್ಷದ ಪಿಯುಸಿಯನ್ನು ಪೂರ್ಣಗೊಳಿಸಿರುವುದರಿಂದ ಮತ್ತು ಅವನು ಪೂರ್ಣಗೊಳಿಸಿರುವುದನ್ನು ಕರ್ನಾಟಕ ಸರ್ಕಾರದಿಂದ ಪದವಿ ಪೂರ್ಣ ಶಿಕ್ಷಣ ಇಲಾಖೆಯಿಂದ ಮನ್ನಣೆ ಮಾಡಲಾಗಿದೆ. ಆದ್ದರಿಂದ, ವಿನಿಯಮಗಳ 7ನೇ ವಿನಿಯಮದ ಮೇರೆಗೆ ಅರ್ಜಿದಾರನು "ತನ್ನ ಪಿಯುಸಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವುದಾಗಿ ಭಾವಿಸಲಾಗಿದೆ. ಆದ್ದರಿಂದ, 2ನೇ ಪ್ರತ್ಯರ್ಜಿದಾರನು, ಖಾಸಗಿಯಾಗಿ ತನ್ನ ಎರಡನೇ ವರ್ಷದ ಪಿಯುಸಿಯನ್ನು ಪೂರ್ಣಗೊಳಿಸಿದ್ದಾನೆ ಎಂಬ ಕಾರಣದ ಮೇಲೆ ಪ್ರವೇಶಕ್ಕಾಗಿ ಅರ್ಜಿದಾರರ ಅಭ್ಯರ್ಥಿಕೆಯನ್ನು ತಿರಸ್ಕರಿಸಿರುವುದನ್ನು ಸಮರ್ಥಿಸಿಕೊಳ್ಳಲಾಗದು. ಆದ್ದರಿಂದ, 5 ವರ್ಷದ ಬಿ.ಎ. ಎಲ್.ಎಲ್.ಬಿ., ಕೋರ್ಸು ಪ್ರವೇಶಕ್ಕಾಗಿ ಅವನು ಅನರ್ಹನಾಗಿದ್ದಾನೆ. ಎರಡನೆಯದಾಗಿ, ಮಾನ್ಯ ನ್ಯಾಯವಾದಿಯು, ಭಾರತದ ವಕೀಲರ ಪರಿಷತ್ತಿನಿಂದ ಹೊರಡಿಸಲಾದ ಕಾನೂನು ಶಿಕ್ಷಣ ನಿಯಮಗಳು, 2008 (ಸಂಕ್ಷಿಪ್ತವಾಗಿ ಈ ನಿಯಮಗಳು) ಮೇಲೆ ಮಾನ್ಯ ನ್ಯಾಯವಾದಿಯು ಅವಲಂಬಿಸಿದ್ದಾರೆ. ಈ ನಿಯಮಗಳ 5ನೇ ನಿಯಮವು,5 ವರ್ಷದ ಎಲ್.ಎಲ್.ಬಿ ಕೋರ್ಸು (ವ್ಯಾಸಂಗದ) ಪ್ರವೇಶಕ್ಕಾಗಿನ ಅರ್ಹತಾ ಪ್ರಮಾಣಗಳನ್ನು ನಿರ್ದಿಷ್ಟಪಡಿಸುತ್ತದೆ. ಈ ವಿನಿಯಮಗಳ 7ನೇ ವಿನಿಯಮವನ್ನು ಹೋಲುತ್ತದೆ. ದೂರು ಅಥವಾ ಅಂಚೆ ಶಿಕ್ಷಣದಲ್ಲಿ ತಮ್ಮ ವ್ಯಾಸಂಗವನ್ನು ಮುಂದುವರೆಸಿದ ತರುವಾಯ + 2 ಹೈಯರ್ ಸೆಕೆಂಡರಿ ಪ್ರಮಾಣಪತ್ರವನ್ನು ಪಡೆದುಕೊಂಡಿರುವ ಅಭ್ಯರ್ಥಿಗಳನ್ನು ಸಂಯೋಜಿತ 5 ವರ್ಷ ಕೋರ್ಸಿನ ಪ್ರವೇಶಕ್ಕಾಗಿ ಅರ್ಹರಾಗುವಂತೆ ಸಹ ಪರಿಗಣಿಸತಕ್ಕದು ಎಂದು ಮುಂದುವರೆದು ಅವಕಾಶ ನೀಡಲಾಗಿದೆ." ಹಾಗಾಗಿ, ಮಾನ್ಯ ನ್ಯಾಯವಾದಿಯ ಪ್ರಕಾರ, ಅರ್ಜಿದಾರನು ಸಹ ಖಾಸಗಿಯಾಗಿ ತನ್ನ ಎರಡನೇ ವರ್ಷದ ಪಿಯುಸಿಯನ್ನು ಪೂರ್ಣಗೊಳಿಸಿದ್ದಲ್ಲಿಯೂ ಸಹ 5 ವರ್ಷದ ಬಿ.ಎ. ಎಲ್.ಎಲ್.ಬಿ., ಕೋರ್ಸ್‌ಗೆ ಪ್ರವೇಶಕ್ಕಾಗಿ ಅವನು ಅರ್ಹನಾಗತಕ್ಕದ್ದು. ಹಾಗಾಗಿ, 2ನೇ ಪ್ರತ್ಯರ್ಜಿದಾರನು, ಸದರಿ ಕೋರ್ಸಿನ ಪ್ರವೇಶಕ್ಕಾಗಿ ಅಜಿದಾರರ ಅಭ್ಯರ್ಥಿಕೆಯನ್ನು ತಿರಸ್ಕರಿಸಿರುವುದು ಸಮರ್ಥನೀಯವಾಗಿರುವುದಿಲ್ಲ.

10. ಮತ್ತೊಂದು ಕಡೆಯಲ್ಲಿ, ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಪ್ರವೇಶ ಮತ್ತು ಅನುದಾನ ಸಹಿತ ಇತ್ಯಾದಿ) ನಿಯಮಗಳು, 2006 (ಸಂಕ್ಷಿಪ್ತವಾಗಿ ನಿಯಮಗಳು, 2006), ವಿದ್ಯಾರ್ಥಿಗೆ ಮೊದಲನೇ ವರ್ಷದಿಂದ ಎರಡನೇ ವರ್ಷಕ್ಕೆ ತನ್ನ ವಿಷಯವನ್ನು ಬದಲಾಯಿಸಿಕೊಳ್ಳಲು ಅನುಮತಿಸಲಾಗದೆಂದು ಸ್ಪಷ್ಟವಾಗಿ ಹೇಳಿದ್ದು ಮತ್ತು ಅಂಥ ಬದಲಾವಣೆಗೆ ಕೋರಿದ್ದಲ್ಲಿ, ಪರಿಮಿತ ಬದಲಾವಣೆಗೆ ಮಾತ್ರ ಅನುಮತಿಸಲಾಗುವುದೆಂದು 2ನೇ ಪ್ರತ್ಯರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಗಣಪತಿ ಭಟ್‌ರವರು ಭಾವಾವೇಶವಾಗಿ ವಾದಿಸಿದ್ದಾರೆ. ಆದಾಗ್ಯೂ, ಅರ್ಜಿದಾರನು, ರೆಗ್ಯುಲರ್ ವಿದ್ಯಾರ್ಥಿಯಾಗಿ ತನ್ನ ಪಿಯುಸಿಯ ಮೊದಲನೇ ವರ್ಷದಲ್ಲಿ ವಿಜ್ಞಾನ ವಿಷಯಗಳನ್ನು ಅಭ್ಯಾಸಿಸಿದ್ದು, ಆದರೆ ಖಾಸಗಿ ವಿದ್ಯಾರ್ಥಿಯಾಗಿ ತನ್ನ ಪಿಯುಸಿಯ ಎರಡನೇ ವರ್ಷದಲ್ಲಿ ಇತಿಹಾಸ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ ಮತ್ತು ರಾಜ್ಯಶಾಸ್ತ್ರದಂಥ ಮಾನವಿಕ ವಿಷಯುಗಳಿಗೆ ವರ್ಗಾವಣೆಗೊಂಡಿದ್ದಾನೆ. ವಿಷಯುಗಳು ಬದಲಾವಣೆ ಯಾಗಿರುವುದರಿಂದ, 2006ನೇ ನಿಯಮಗಳ 10ನೇ ನಿಯಮದೊಂದಿಗೆ ಅನುಸಾರವಾಗಿರುವುದಿಲ್ಲ. ಅದು, ಅರ್ಜಿದಾರನು ತನ್ನ ಪಿಯುಸಿ ಕೋರ್ಸ್‌ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾನೆಂದು ಹೇಳಲಾಗದು. ಹಾಗಾಗಿ, 2ನೇ ಪ್ರತ್ಯರ್ಜಿದಾರನು, ಪ್ರವೇಶಕ್ಕಾಗಿ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿರುವುದನ್ನು ಸಮರ್ಥಿಸಿಕೊಂಡಿದ್ದಾನೆ. ಮಾನ್ಯ ನ್ಯಾಯವಾದಿಯು, ಪ್ರಶ್ನಿತ ಪತ್ರವ್ಯವಹಾರ ದಿನಾಂಕ 13.08.2016ನ್ನು ಸಮರ್ಥಿಸಿಕೊಂಡಿದ್ದಾನೆ.

11. ಪ್ರತ್ಯುತ್ತರವಾಗಿ, 2006ನೇ ನಿಯಮಗಳು, ಖಾಸಗಿಯಾಗಿ ತಮ್ಮ ಪಿಯುಸಿಯನ್ನು ಮಾಡಿರುವ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲವೆಂದು ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ವಾದವನ್ನು ಮಂಡಿಸಿದ್ದಾನೆ. ವ್ಯಾಸಂಗವನ್ನು ರೆಗ್ಯುಲರ್ ಕೋರ್ಸ್ ಮೂಲಕ ಪಿಯುಸಿ ಕಾಲೇಜುಗಳಿಂದ ತಮ್ಮ ಪಿಯುಸಿಯನ್ನು ಪೂರ್ಣಗೊಳಿಸಿರುವ "ಅಭ್ಯರ್ಥಿಗಳ" ಬಗ್ಗೆ ಮಾತ್ರ ಈ ನಿಯಮಗಳು ವ್ಯವಹರಿಸುತ್ತದೆ. ಆದ್ದರಿಂದ, 2006ನೇ ನಿಯಮಗಳ 10ನೇ ನಿಯಮದ ಮೂಲಕ ವಿಧಿಸಲಾದ ಷರತ್ತನ್ನು, ಅರ್ಜಿದಾರನ ವಿರುದ್ಧ ಓದಿಕೊಳ್ಳಲಾಗದು. ಅದಕ್ಕೂ ಮಿಗಿಲಾಗಿ, ಅವನು ಖಾಸಗಿಯಾಗಿ ತನ್ನ ಪಿಯುಸಿಯ

ಎರಡನೇ ವರ್ಷವನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ, ಪಿಯುಸಿಯ ಮೊದಲನೇ ವರ್ಷದಿಂದ ಪಿಯುಸಿಯ ತನ್ನ ಎರಡನೇ ವರ್ಷದ ತನ್ನ ವಿಷಯಗಳನ್ನು ಬದಲಾಯಿಸಿಕೊಳ್ಳುವುದರಿಂದ ವಿದ್ಯಾರ್ಥಿಯನ್ನು ಪ್ರತಿಬಂಧಿಸುವಂತೆ ಅದರ ಯಾವುದೇ ಕಾನೂನಿನಲ್ಲಿ ಪ್ರತಿಷೇಧಿಸಲಾಗದು. ಅರ್ಜಿದಾರನು, ವಿಜ್ಞಾನ, ವಿಷಯಗಳಲ್ಲಿ ದುರ್ಬಲನಾಗಿರುವುದರಿಂದ, ವಿಜ್ಞಾನ ವಿಷಯಗಳಿಂದ ಕಲಾ ವಿಷಯಗಳಿಗೆ ಬದಲಾಯಿಸಿಕೊಂಡಿರುವುದನ್ನು ಸಮರ್ಥಿಸಿಕೊಳ್ಳಲಾಗಿದೆ. ಮುಂದುವರೆದು, ವಿಶ್ವ ವಿದ್ಯಾಲಯಗಳ ವಿನಿಯಮನ, ಬಾರ್ ಕೌನ್ಸಿಲ್‌ನಿಂದ ಜಾರಿಗೊಳಿಸಲಾದ ನಿಯಮಗಳು ಪಿಯುಸಿಯ ಮೊದಲನೇ ವರ್ಷ ಮತ್ತು ಎರಡನೇ ವರ್ಷದ ನಡುವೆ ಆಭ್ಯಸಿದ ತನ್ನ ಕೋರ್ಸಿನ ಬದಲಾವಣೆಯಿಂದ ವ್ಯಕ್ತಿಯನ್ನು ಪ್ರತಿಷೇಧಿಸಲಾಗದು. ಆದ್ದರಿಂದ ಅರ್ಜಿದಾರನ ವಿರುದ್ಧ ಪ್ರತಿಷೇಧಿಸಲಾಗದು. ಹಾಗಾಗಿ, ಅವನನ್ನು 5 ವರ್ಷದ ಬಿ.ಎ.ಎಲ್.ಎಲ್.ಬಿ., ಕೋರ್ಸ್ ಪ್ರವೇಶದಿಂದ ಅನರ್ಹಗೊಳಿಸಲಾಗದು ಎಂದು ನಿವೇದಿಸಿದ್ದಾರೆ.

12. ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಲಾಗಿದೆ ಮತ್ತು ಪ್ರಶ್ನಿತ ಪತ್ರ ವ್ಯವಹಾರಗಳನ್ನು ಪರಿಶೀಲಿಸಲಾಗಿದೆ.

13. 2006ನೇ ನಿಯಮಗಳನ್ನು ಪರಿಶೀಲಿಸಿದಾಗ, ಸದರಿ ನಿಯಮಗಳು, ಪದವಿ ಪೂರ್ವ ಕಾಲೇಜುಗಳು, ಅಥವಾ ಖಾಸಗಿ ಅನುದಾನ ರಹಿತ ಕಾಲೇಜುಗಳು, ಅಥವಾ ಖಾಸಗೀ ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ ಅನ್ವಯಿಸುತ್ತದೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆದ್ದರಿಂದ, ಮೇಲೆ ನಮೂದಿಸಲಾದ ನಾಲ್ಕು ಶಿಕ್ಷಣ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ "ವಿದ್ಯಾರ್ಥಿಗಳ" ಬಗ್ಗೆ ಈ ನಿಯಮಗಳು ವ್ಯವಹರಿಸುತ್ತದೆ. ದೂರ ಶಿಕ್ಷಣದಲ್ಲಿ ಅಂದರೆ ಖಾಸಗಿಯಾಗಿ ಪಿಯುಸಿ ಕೋರ್ಸನ್ನು ಪಾಸು ಮಾಡಿರುವ ವ್ಯಕ್ತಿಗಳ ಬಗ್ಗೆ ಈ ನಿಯಮಗಳು ವ್ಯವಹರಿಸುವುದಿಲ್ಲ. ಈ ನಿಯಮಗಳ ಶೀರ್ಷಿಕೆಯು, ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಅನುದಾನಿತ) ನಿಯಮಗಳು, 2006" ಎಂಬ ಸಂಗತಿಯಿಂದ ಅದು ಸ್ಪಷ್ಟವಾಗಿದೆ. ಹಾಗಾಗಿ, 2006ನೇ ನಿಯಮಗಳ 2ನೇ ನಿಯಮ, ಪರಿಭಾಷೆಯ

ಖಂಡವನ್ನೊಳಗೊಂಡಿದ್ದು, "ಅನುದಾನಿತ ಕಾಲೇಜು" "ಸರ್ಕಾರಿ ಪದವಿ ಪೂರ್ವ ಕಾಲೇಜು", "ಪದವಿ ಪೂರ್ವ ಕಾಲೇಜು" ಮತ್ತು "ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜು"ಗಳು ಎಂಬ ಪದಗಳನ್ನು ಪರಿಭಾಷಿಸಲಾಗಿದೆ. *ಮಿಗಿಲಾಗಿ 2006ನೇ ನಿಯಮಗಳ 2(14)ನೇ ನಿಯಮ, ವಾಸ್ತವಿಕವಾಗಿ ಹಾಜರಾಗಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಮತ್ತು ಸುಸಂಬದ್ಧ ವರ್ಷದ ಮೂರು ಒಂದಾದ ಮೇಲೊಂದು ಬರುವ ವಾರ್ಷಿಕ ಪರೀಕ್ಷೆಗಳ ವ್ಯವಹರಣೆಯಲ್ಲಿ ಕಾಲೇಜಿನಲ್ಲಿರುವ ವಿಷಯದಲ್ಲಿ IIನೇ ಪದವಿ ಪೂರ್ವ ಪರೀಕ್ಷೆಯನ್ನು ಬರೆಯಲಾಗಿದೆ ಎಂಬ ಅರ್ಥದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಂಬ ಪದಗಳನ್ನು ಪರಿಭಾಷಿಸಲಾಗಿದ್ದು, ಹೊಸ ವರ್ಷದಲ್ಲಿ ಪ್ರವೇಶದ ಮೊದಲನೇ ವರ್ಷ ಪದವಿ ಪೂರ್ವ ಕ್ಲಾಸಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಅವರು ಎಸ್‌ಎಸ್‌ಎಲ್‌ಸಿ ಅಥವಾ 10ನೇ ತರಗತಿ ಪಾಸು ಮಾಡಿದ ಪ್ರಮಾಣಪತ್ರಗಳು ಮತ್ತು ಅಂಥ ಲೆಕ್ಕ ಶೀರ್ಷಿಕೆಯಿಂದ ಕ್ಲಾಸ್‌ರೂಂನಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅವಧಿಯನ್ನು ಹಾಜರುಪಡಿಸಿರುವ ವಿದ್ಯಾರ್ಥಿಗಳ ವಾಸ್ತವಿಕ ಲೆಕ್ಕ ಶೀರ್ಷಿಕೆ ಮೂಲಕ ಲೆಕ್ಕಹಾಕತಕ್ಕದ್ದು. (ಒತ್ತು ನೀಡಿರುವುದನ್ನು ಸೇರಿಸಲಾಗಿದೆ) ಹಾಗೆಯೇ "ವಿಷಯ" ಎಂಬ ಪದಗಳನ್ನು IIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಅಭ್ಯಾಸದ ವಿಷಯಗಳು ಮತ್ತು ಇಲಾಖೆಯ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪಠ್ಯ ಕ್ರಮಗಳೊಂದಿಗೆ ಅನುಸಾರವಾಗಿ ಪದವಿ ಪೂರ್ವ ಕಾಲೇಜಿನಲ್ಲಿ ಬೋಧಿಸುತ್ತಿರುವ ಅರ್ಥದಂತೆ 2006ನೇ ನಿಯಮಗಳ ನಿಯಮ 2(15)ರಲ್ಲಿ ಪರಿಭಾಷಿಸಲಾಗಿದೆ.*

14. ಹಾಗಾಗಿ, ಪರಿಭಾಷೆಯ ಖಂಡಗಳು ಮತ್ತು 2006ನೇ ನಿಯಮಗಳ ಶೀರ್ಷಿಕೆಯನ್ನು ಪರಿಶೀಲಿಸಿದಲ್ಲಿ, ಸದರಿ ನಿಯಮಗಳು, ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತಿದ್ದು ಮತ್ತು ದೂರ ಶಿಕ್ಷಣದ ಮೂಲಕ ಖಾಸಗಿಯಾಗಿ ತಮ್ಮ ಪಿಯುಸಿ ಕೋರ್ಸ್‌ನ್ನು ಪೂರ್ಣಗೊಳಿಸಿರುವ ಅವಧಿಗೆ ಅನ್ವಯವಾಗುವುದಿಲ್ಲ ಎಂಬ ಸಂಗತಿಯನ್ನು ಸ್ಪಷ್ಟವಾಗಿ ಸಾಬೀತುಗೊಳಿಸುತ್ತದೆ. ಆದ್ದರಿಂದ, ಅರ್ಜಿದಾರನು, ತನ್ನ ವಿಷಯವನ್ನು, ಪಿಯುಸಿಯ ಮೊದಲನೇ ವರ್ಷ ಮತ್ತು 2ನೇ ವರ್ಷದ ನಡುವೆ ವಿಜ್ಞಾನದಿಂದ ಕಲಾ

ವಿಷಯಗಳಿಗೆ ಬದಲಾಯಿಸಿಕೊಳ್ಳಲು ಅನುಮತಿಸಲಾಗದೆಂದು ಪ್ರತ್ಯರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಎತ್ತಲಾದ ಪರವಾದಿ ಹಾಜರಾದ ಮಾನ್ಯ ನ್ಯಾಯವಾದಿಯು ಎತ್ತಲಾದ ವಾದಗಳನ್ನು 2006ನೇ ನಿಯಮಗಳ 10ನೇ ನಿಯಮದಲ್ಲಿ ಹಾಗೇ ಬದಲಾಯಿಸಿಕೊಳ್ಳಲು ಸ್ಪಷ್ಟವಾಗಿ ಅಂಗೀಕರಿಸಲಾಗದು. 2006ನೇ ನಿಯಮಗಳ 10ನೇ ನಿಯಮ ಖಾಸಗಿಯಾಗಿ ತಮ್ಮ ಪಿಯುಸಿ ಕೋರ್ಸನ್ನು ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಅನ್ವಯಿಸಲಾಗದು.

15. ಮತ್ತೊಂದು ಕಡೆಯಲ್ಲಿ, ವಿನಿಯಮಗಳ 7ನೇ ನಿಯಮ ಕೆಳಗಿನಂತಿದೆ:

7. **ಪ್ರವೇಶಕ್ಕಾಗಿ ಅರ್ಹತಾ ಪ್ರಮಾಣಗಳು**:

(ಎ) ದೇಶದಲ್ಲಿ ಕೋರ್ಸನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮೇಲೆ ಅರ್ಹತಾ ಪ್ರಮಾಣಪತ್ರವನ್ನು ನೀಡುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದಿಂದ ಮನ್ನಣೆ ಪಡೆದ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಸರ್ಕಾರದಿಂದ ಮನ್ನಣೆ ಪಡೆದ ವಿದೇಶದಿಂದ ಅದಕ್ಕೆ ಸಮನಾದ ಯಾವುದೇ ಸಂಸ್ಥೆಯಿಂದ ರಚಿಸಲಾದ, ಪದವಿ ಪೂರ್ವ ಕೋರ್ಸ್ ಅಥವಾ ಹಿರಿಯ ಸೆಕೆಂಡರಿ ಕೋರ್ಸ್ (+2) ಅಥವಾ ಅದಕ್ಕೆ ಸಮನಾಗಿ (11+1)ರಂತೆ, ಭಾರತ ವಿಶ್ವವಿದ್ಯಾಲದಿಂದ ಮನ್ನಣೆ ಪಡೆದ ಅಥವಾ ಹೊರಗೆ ಅಥವಾ ಹಿರಿಯ ಸೆಕೆಂಡರಿ ಬೋರ್ಡು ಅಥವಾ ಅದಕ್ಕೆ ಸಮನಾಗಿ ಸೀನಿಯರ್ ಸ್ಕೂಲ್ ಲಿವಿಂಗ್ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ (ಎ) ಮಟ್ಟದ್ದಾಗಿದ್ದು, ಅರ್ಜಿದಾರನು ಪದವಿ ಪೂರ್ವ ಕೋರ್ಸ್‌ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತಾನೆ.

**ಕಾನೂನು ಶಿಕ್ಷಣ, 2008ರ ನಿಯಮಗಳ 5ನೇ ನಿಯಮ**: ಪ್ರವೇಶಕ್ಕಾಗಿ ಅರ್ಹತೆಯು ಕೆಳಗಿನಂತಿದೆ:

(ಎ) . . . . . . . . . . . . . .

(ಬಿ) **ಸಂಯೋಜಿತ ಪದವಿ ಕಾರ್ಯಕ್ರಮ**: ಭಾರತದ ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದ ಅಥವಾ ಹೊರಗೆ ಅಥವಾ ಅಧಿನಿಯಮದ ಸೆಕೆಂಡರಿ ಬೋರ್ಡ್ ಅಥವಾ ಅದಕ್ಕೆ ಸಮನಾಗಿ, ಸೀನಿಯರ್ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ಕೋರ್ಸ್)ನಲ್ಲಿ (ಹಾಗೆಯೇ 11+1 ಯಂತೆ 'ಎ' ಮಟ್ಟದ್ದಾಗಿದ್ದು). ಸೀನಿಯರ್ ಸೆಕೆಂಡರಿ ಸ್ಕೂಲ್ ಕೋರ್ಸ್ (+2) ಅಥವಾ ಅದಕ್ಕೆ ಸಮನಾಗಿ ಯಶಸ್ವಿಯಾಗಿ ಪೂರ್ಣಗೊಳಿಸಿರುವ ಅರ್ಜಿದಾರನಾಗಿದ್ದು, ಈ ಕೋರ್ಸನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮೇಲೆ ದೇಶದಲ್ಲಿ ಅರ್ಹತಾ ಪ್ರಮಾಣಪತ್ರವನ್ನು ನೀಡುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಅದಕ್ಕೆ ಸಮನಾಗಿ ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ವಿದೇಶದಿಂದ ಅಥವಾ ಅದಕ್ಕೆ ಸಮನಾದ ಸಂಸ್ಥೆಯಿಂದ ರಚಿಸಬಹುದಾಗಿದ್ದು, ನೋಂದಾಯಿತ ಉದ್ದೇಶಕ್ಕಾಗಿ ಭಾರತದ ವಕೀಲರ ಪರಿಷತ್ತಿನಿಂದ ಮನ್ನಣೆ ಪಡೆದ ಕಾನೂನಿನಲ್ಲಿ ಅಂಥ ಪದವಿಯನ್ನು ಪಡೆದುಕೊಂಡಿರುವ ವಿಶ್ವ ವಿದ್ಯಾಲಯದಿಂದ ಮೊದಲನೇ ಪದವಿಯಾಗಿ ಇತರೇ ಯಾವುದೇ ವಿಷಯದಲ್ಲಿ ಪದವಿಯೊಂದಿಗೆ ಕಾನೂನಿನಲ್ಲಿ ಸಂಯೋಜಿತ ಪದವಿಯನ್ನು ಪಡೆದುಕೊಂಡಿರುವ ಕಾನೂನು ಶಿಕ್ಷಣ ಕೇಂದ್ರಗಳ ಕಾರ್ಯಕ್ರಮವು ಅನ್ವಯಿಸುತ್ತದೆ ಮತ್ತು ಅಂಗೀಕರಿಸಬಹುದು.

ಪರಂತು, ಅರ್ಜಿದಾರರು, ದೂರ ಅಥವಾ ಅಂಚೆ ಶಿಕ್ಷಣ ವಿಧಾನದಲ್ಲಿ ಪ್ರಾಸಿಕ್ಯೂಟಿಂಗ್ ಅಭ್ಯಸಿಸಿದ ತರುವಾಯ +2 ಹೈಯರ್ ಸೆಕೆಂಡರಿ ಪಾಸ್ ಪ್ರಮಾಣಪತ್ರ ಅಥವಾ ಮೊದಲನೇ ಪದವಿ ಪ್ರಮಾಣಪತ್ರವನ್ನು ಪಡೆದುಕೊಂಡಿದ್ದು, ಸಂದರ್ಭಾನುಸಾರ ಸಂಯೋಜಿತ ಐದು ವರ್ಷಗಳ ಕೋರ್ಸ್ ಅಥವಾ ಮೂರು ವರ್ಷಗಳ ಎಲ್.ಎಲ್.ಬಿ., ಕೋರ್ಸ್‌ನಲ್ಲಿ ಪ್ರವೇಶಕ್ಕಾಗಿ ಅರ್ಹರಾಗಿ ಸಹ ಪರಿಗಣಿಸತಕ್ಕದ್ದು.

**ವಿವರಣೆ**:– ಅರ್ಜಿದಾರರು, ಕಾನೂನು ಕೋರ್ಸ್‌ನಲ್ಲಿ ಪ್ರವೇಶಕ್ಕಾಗಿ ಅರ್ಹನಾಗಿರದೇ ಅಂಥ ಪ್ರಾಸಿಕ್ಯೂಟಿಂಗ್ ಅಭ್ಯಾಸಕ್ಕಾಗಿ ಯಾವುದೇ

ಮೂಲ ಅರ್ಹತೆಯನ್ನು ಹೊಂದಿರದೇ ನೇರವಾಗಿ ಮುಕ್ತ ವಿಶ್ವವಿದ್ಯಾನಿಲಯಗಳ ಮೂಲಕ 10+2 ಅಥವಾ ಪದವಿ/ಸ್ನಾತಕೋತ್ತರ ಪದವಿಯನ್ನು ಪಡೆದುಕೊಳ್ಳುವುದು.

16. ಈ ಎರಡೂ ಉಪಬಂಧಗಳನ್ನು ಪರಿಶೀಲನೆಯಿಂದ, ಅವುಗಳೆರಡೂ ಪದಗಳ ಸಂಯೋಜನೆಯಲ್ಲಿ ಬಹುತೇಕ ಅದೇ ವಿಧವಾಗಿದೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. "ಯಶಸ್ವಿಯಾಗಿ ಪದವಿ–ಪೂರ್ವ ಕೋರ್ಸ್‌ನ್ನು ಪೂರ್ಣಗೊಳಿಸಿರುವ ಅರ್ಜಿದಾರನು" ಎಂಬ ಪದಗಳನ್ನು ಈ ಎರಡೂ ಉಪಬಂಧಗಳಲ್ಲಿ ಬಳಸಿಕೊಳ್ಳಲಾಗಿದೆ. ಆದಾಗ್ಯೂ, ಪದವಿ ಪೂರ್ವ ಕೋರ್ಸನ್ನು ಕಾಲೇಜಿನಲ್ಲಿ ರೆಗ್ಯುಲರ್ ಆಗಿ ಅಭ್ಯಸಿದ ತರುವಾಯ ಪೂರ್ಣಗೊಳಿಸತಕ್ಕದ್ದು ಎಂಬ ಅಧ್ಯಾದೇಶವನ್ನು ಈ ಉಪಬಂಧಗಳಲ್ಲಾಗಲಿ ಮಾಡಿರುವುದಿಲ್ಲ. ಪ್ರವೇಶಕ್ಕಾಗಿ ಅರ್ಹನಾಗಿರಬಹುದಾಗಿದ್ದು, ದೂರ ಅಥವಾ ಅಂಚೆ ಶಿಕ್ಷಣ ವಿಧಾನದಲ್ಲಿ ತನ್ನ ಅಭ್ಯಾಸವನ್ನು ಮುಂದುವರೆಸಿರುವ ಅಪೀಲುದಾರನಿಗೆ ವಾಸ್ತವವಾಗಿ ಮೊದಲನೇ ಪರಂತುಕವು ಅನುಮತಿಸುತ್ತದೆ. ಮುಕ್ತ ವಿಶ್ವವಿದ್ಯಾಲಯ ಪದ್ಧತಿಯಿಂದ 10+2 ಪ್ರಮಾಣಪತ್ರವನ್ನು ಪಡೆದುಕೊಂಡಿರುವ ಈ ಅಪೀಲುದಾರರಿಗೆ ಮಾತ್ರ 5 ವರ್ಷ ಬಿ.ಎ.ಎಲ್.ಎಲ್.ಬಿ., ಕೋರ್ಸಿನ ಪ್ರವೇಶಕ್ಕಾಗಿ ಅನರ್ಹರಾಗಿರುವಂತೆ ಘೋಷಿಸಲಾಗಿದೆ. ಹಾಗಾಗಿ, ಅರ್ಜಿದಾರನು, ಮುಕ್ತ ವಿಶ್ವವಿದ್ಯಾನಿಲಯದಿಂದ ಪಿಯುಸಿ ತನ್ನ ಎರಡನೇ ವರ್ಷವನ್ನು ಪೂರ್ಣಗೊಳಿಸದೇ, ಆದರೆ, ಖಾಸಗಿಯಾಗಿ ಪೂರ್ಣಗೊಳಿಸಿದ್ದಾನೆ. ಅಲ್ಲದೆ, ಅರ್ಜಿದಾರನು, ಕರ್ನಾಟಕ ಸರ್ಕಾರದಿಂದ ಮನ್ನಣೆ ಪಡೆದ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಪ್ರಮಾಣೀಕರಿಸಿದ್ದಾನೆ ಮತ್ತು ಪ್ರಮಾಣ ಪತ್ರ ನೀಡಲಾಗಿದೆ. ಆದ್ದರಿಂದ, ಅರ್ಜಿದಾರನು, ಮೇಲೆ ನಮೂದಿಸಲಾದ ಎರಡನೇ ಪರಂತುಕದಲ್ಲಿ ಒಳಗೊಂಡಿರುವ ಪ್ರತಿಷೇಧದೊಳಗೆ ಬರುವುದಿಲ್ಲ. ಹಾಗಾಗಿ, ಅರ್ಜಿದಾರನು, ಈ ವಿನಿಯಮಗಳು ಮತ್ತು ನಿಯಮಗಳ ಹಿನ್ನೆಲೆಯಲ್ಲಿ 5 ವರ್ಷದ ಬಿ.ಎ. ಎಲ್.ಎಲ್.ಬಿ., ಕೋರ್ಸಿನ ಪ್ರವೇಶಕ್ಕಾಗಿ ಅರ್ಹನಾಗಿರುತ್ತಾನೆ. ಆದ್ದರಿಂದ, 2ನೇ ಪ್ರತ್ಯರ್ಜಿದಾರನು, ಅರ್ಜಿದಾರನು, ತನ್ನ ಎರಡನೇ ವರ್ಷದ ಪಿಯುಸಿ ಕೋರ್ಸ್‌ನ್ನು ಖಾಸಗಿಯಾಗಿ ಪೂರ್ಣಗೊಳಿಸಿದ್ದಾನೆಂಬ ಕಾರಣದ ಮೇಲೆ

ಸ್ಪಷ್ಟವಾಗಿದ್ದು ಸದರಿ 5 ವರ್ಷದ ಕೋರ್ಸ್‌ಗೆ ಪ್ರವೇಶಕ್ಕಾಗಿ ಅರ್ಜಿದಾರರ ಪ್ರಕರಣವನ್ನು ತಿರಸ್ಕರಿಸಿರುವುದು ಸಮರ್ಥನೀಯವಲ್ಲ.

17. ಅವಧಿಯು ಕಡಿಮೆ ಇರುವುದರಿಂದ, ಕೊನೆಯ ದಿನಾಂಕ ಇತ್ಯಾದಿ., 31.08.2016ರಂದು ಅಥವಾ ಮುಂಚೆ ಸದರಿ ಮೊತ್ತವನ್ನು ಅರ್ಜಿದಾರನು ಒಪ್ಪಿಸಿದಲ್ಲಿ, ಪ್ರವೇಶ ಶುಲ್ಕವನ್ನು ಅಂಗೀಕರಿಸುವಂತೆ 2ನೇ ಪ್ರತ್ಯರ್ಜಿದಾರನಿಗೆ ಈ ನ್ಯಾಯಾಲಯ ನಿರ್ದೇಶಿಸುತ್ತದೆ. 2ನೇ ಪ್ರತ್ಯರ್ಜಿದಾರನು ಹೇಳಲಾದಂತೆ ಇತರೇ ಎಲ್ಲಾ ಅರ್ಹತಾ ಅಗತ್ಯತೆಗಳನ್ನು ಪೂರೈಸಿದ್ದಲ್ಲಿ ಅರ್ಜಿದಾರನಿಗೆ ಪ್ರವೇಶ ನೀಡುವುದಕ್ಕೆ 2ನೇ ಪ್ರತ್ಯರ್ಜಿದಾರನಿಗೆ ಈ ನ್ಯಾಯಾಲಯ ಮುಂದುವರೆದು ನಿರ್ದೇಶಿಸುತ್ತದೆ. ಆದಾಗ್ಯೂ, 2ನೇ ಪ್ರತ್ಯರ್ಜಿದಾರನು, ಅವನು ಖಾಸಗಿಯಾಗಿ ಎರಡನೇ ವರ್ಷದ ಪದವಿ ಪೂರ್ವ ಕೋರ್ಸನ್ನು ಪೂರ್ಣಗೊಳಿಸಿದ್ದಾನೆಂಬ ಕಾರಣದ ಮೇಲೆ ಮಾತ್ರ ಪ್ರವೇಶಕ್ಕಾಗಿ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಲಾಗದು.

18. ಮಾಹಿತಿಯನ್ನು ಡಾ॥ ರಾಮ್ ಮನೋಹರ್ ಲೋಹಿಯಾ ಕಾನೂನು ಕಾಲೇಜು ಮತ್ತು ಕರ್ನಾಟಕ ಕಾನೂನು ವಿಶ್ವವಿದ್ಯಾಲಯಕ್ಕೆ ಆದೇಶದ ಪರಿಣಾಮಕಾರಿ ಭಾಗವನ್ನು ನೀಡಲು ಈ ಕೂಡಲೇ ರಿಜಿಸ್ಟ್ರಾರ್ – ನ್ಯಾಯಿಕ ರವರಿಗೆ ನಿರ್ದೇಶಿಸಲಾಗಿದೆ.

19. ಈ ಅರ್ಜಿಯನ್ನು ಈ ಮೂಲಕ ಅಂಗೀಕರಿಸಲಾಗಿದೆ.